ಪತ್ರಿಕೆಯ ಹೆಸರು : NAME OF THE NEWS PAPER:

# ಮೆಟ್ರೋ 2ನೇ ಹಂತ: 3 ನಿಲ್ದಾಣಕ್ಕೆ 940 ಕೋಟಿ

## ಬಿಐಎಎಲ್ 800 ಕೋಟಿ, ಎಂಬಸಿ 140 ಕೋಟಿ ಹೂಡಿಕೆ | ಸಿಎಂ ಸಮ್ಮುಖದಲ್ಲಿ ಮೂರು ಸಂಸ್ಥೆಗಳು ಒಪ್ಪಂದ

ಬೆಂಗಳೂರು: ಬಹುನಿರೀಕ್ಷಿತ ಹೊರವರ್ತುಲ ರಸ್ತೆ-ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಡುವಿನ ಮೆಟ್ರೋ ರೈಲು ಮಾರ್ಗ ನಿರ್ಮಾಣಕ್ಕೆ ಸಂಬಂಧಿಸಿದಂತೆ ಮಂಗಳವಾರ ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ)ದಲ್ಲಿ ಎರಡು ಸಂಸ್ಥೆಗಳೊರದಿಗೆ ಬೆಂಗಳೂರು ಮೆಟ್ರೋ ರೈಲು ನಿಗಮ (ಬಿಎಂಆರ್‌ಸಿಎಲ್)ವು ಒಟ್ಟಾರೆ 940 ಕೋಟಿ ಮೊತ್ತದ ಒಡಂಬಡಿಕೆ ಮಾಡಿಕೊಂಡಿತು.

ಉದ್ದೇಶಿತ ಮಾರ್ಗದಲ್ಲಿ ಬರುವ ನಿಲ್ದಾಣವೊಂದರ ನಿರ್ಮಾಣಕ್ಕೆ ಎಂಬಸಿ ಗ್ರೂಪ್ 140 ಕೋಟಿ ರೂ. ಮತ್ತು ವಿಮಾನ ನಿಲ್ದಾಣದ ಆವರಣದಲ್ಲಿ ಬರುವ ಎರಡು ನಿಲ್ದಾಣಗಳ ನಿರ್ವಹಣೆಗೆ ಸಂಬಂಧಿಸಿದಂತೆ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ (ಬಿಐಎಎಲ್) ಸುಮಾರು 800 ಕೋಟಿ ರೂ. ಹೂಡಿಕೆಗೆ ಮುಂದೆ ಬಂದಿದ್ದು ಈ ಕುರಿತು ಬಿಎಂಆರ್‌ಸಿಎಲ್ ಜತೆಗೆ ಗೃಹ ಕಚೇರಿ ಕೃಷ್ಣಾದಲ್ಲಿ ಪರಸ್ಪರ ಸಹಿ ಹಾಕಲಾಯಿತು. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇದಕ್ಕೆ ಸಾಕ್ಷಿಯಾದರು.

ಹೊರವರ್ತುಲ ರಸ್ತೆ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ವಿಮಾನ ನಿಲ್ದಾಣ ನಡುವೆ 56 ಕಿ.ಮೀ. ಉದ್ದದ ಮೆಟ್ರೋ ಮಾರ್ಗದಲ್ಲಿ ನಿರ್ಮಾಣಗೊಳ್ಳಲಿದ್ದು ಒಟ್ಟಾರೆ 30 ನಿಲ್ದಾಣಗಳು ಬರಲಿವೆ. ಈ ಪೈಕಿ 4.95 ಕಿ.ಮೀ. ಚಿಕ್ಕ ಮಾರ್ಗ ಹಾಗೂ ಎರಡು ನಿಲ್ದಾಣಗಳು ಏರ್‌ಪೋರ್ಟ್ ಆವರಣದಲ್ಲೇ ತಲೆಯೆತ್ತಲಿವೆ. ಇವೆರಡನ್ನೂ ಬಿಎಂಆರ್‌ಸಿಎಲ್ ನಿರ್ಮಾಣ ಮಾಡಲಿದ್ದು ನಿರ್ವಹಣೆಯೂ ಅದರದ್ದೇ ಆಗಿರಲಿದೆ.

14,844 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ಈ ಮೆಟ್ರೋ ಮಾರ್ಗವು 2024ರ ಡಿಸೆಂಬರ್‌ಗೆ ಪೂರ್ಣಗೊಳ್ಳಲಿದೆ. ಇದರಿಂದ ನಿತ್ಯ 7.8 ಲಕ್ಷ ಪ್ರಯಾಣಿಕರಿಗೆ ಅನುಕೂಲವಾಗಲಿದೆ. 2041ರ ವೇಳೆಗೆ ಈ ಪ್ರಮಾಣ 1.88 ಲಕ್ಷಕ್ಕೆ ಏರಿಕೆ ಆಗುವ ನಿರೀಕ್ಷೆ ಇದೆ. ವಿಮಾನ ನಿಲ್ದಾಣದಲ್ಲಿ ಮೆಟ್ರೋ ಸಿವಿಲ್ ಕಾಮಗಾರಿ 2021ರ ಮಾರ್ಚ್‌ನಿಂದ ಆರಂಭಗೊಳ್ಳಲಿದೆ. ಒಟ್ಟು ಐದು ಪ್ಯಾಕೇಜ್‌ಗಳಲ್ಲಿ ಈ ಮಾರ್ಗದ ಕಾಮಗಾರಿ ಕೈಗೆತ್ತಿಕೊಳ್ಳಲು ಉದ್ದೇಶಿಸಿದ್ದು ಇದರಲ್ಲಿ ಸಿಲ್ಕ್ ಬೋರ್ಡ್ ಜಂಕ್ಷನ್-ಕೆ.ಆರ್. ಪುರ ನಡುವಿನ ಎರಡು ಪ್ಯಾಕೇಜ್‌ಗಳ ಕಾಮಗಾರಿ 2020ರ ಡಿಸೆಂಬರ್‌ನಿಂದ ಆರಂಭಗೊಳಿಸಲು ಬಿಎಂಆರ್‌ಸಿಎಲ್ ನಿರ್ಧರಿಸಿದೆ.

**'ಎಂಬಸಿ ಬೊಲೆವಾರ್ಡ್ ಬೆಟ್ಟಹಲಸೂರು':** ಈ ಮಾರ್ಗದಲ್ಲೇ ಬರುವ ಬೆಟ್ಟಹಲಸೂರು ಮೆಟ್ರೋ ನಿಲ್ದಾಣ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರತಿಷ್ಠಿತ ಎಂಬಸಿ ಗ್ರೂಪ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು ಇದಕ್ಕಾಗಿ ಕಂಪನಿಯು 140 ಕೋಟಿ ರೂ. ಹೂಡಿಕೆ ಮಾಡಲಿದೆ. ಇದಕ್ಕೆ ಪ್ರತಿಯಾಗಿ 'ಎಂಬಸಿ ಬೊಲೆವಾರ್ಡ್ ಬೆಟ್ಟಹಲಸೂರು ಮೆಟ್ರೋ ನಿಲ್ದಾಣ' ಎಂದು ನಾಮಕರಣ ಮಾಡಲುತ್ತಿದೆ. ಅಲ್ಲದೆ, 3,248 ಚ. ಮೀ. ವ್ಯಾಪ್ತಿಯಲ್ಲಿ ತಲೆಯೆತ್ತಲಿರುವ ಈ ನಿಲ್ದಾಣದ ಆವರಣದಲ್ಲಿ ಸಾವಿರ ಚದರಡಿ ಜಾಹಿರಾತು ಹಾಗೂ 3 ಸಾವಿರ ಚದರಡಿ ವಾಣಿಜ್ಯ ಉದ್ದೇಶಕ್ಕೆ ಎಂಬಸಿ ಗ್ರೂಪ್‌ಗೆ ಬಿಎಂಆರ್‌ಸಿಎಲ್ ಮೀಸಲಿಡಲಿದೆ.

ನಿಲ್ದಾಣ ನಿರ್ಮಾಣ, ನಿರ್ವಹಣೆ, ಕಾರ್ಯಾಚರಣೆ, ಸಿವಿಲ್ ಕಾಮಗಾರಿ, ಎಲೆಕ್ಟ್ರೋ ಮೆಕಾನಿಕಲ್ ಕಾರ್ಯಗಳು, ಭೂಸ್ವಾಧೀನ ಸೇರಿದಂತೆ ಎಲ್ಲ ಪ್ರಕ್ರಿಯೆಗಳನ್ನೂ ಬಿಎಂಆರ್‌ಸಿಎಲ್ ನಿರ್ವಹಿಸಲಿದೆ. ಇದಕ್ಕೆ ತಗಲುವ ವೆಚ್ಚವನ್ನು ಮಾತ್ರ ಎಂಬಸಿ ಗ್ರೂಪ್ ಭರಿಸಲಿದೆ. 2024ಕ್ಕೆ ಪೂರ್ಣಗೊಳ್ಳಲಿರುವ ಈ ನಿಲ್ದಾಣದಿಂದ 8 ಸಾವಿರ ಪ್ರಯಾಣಿಕರು ನಿತ್ಯ ಸಂಚರಿಸಲಿದ್ದು 2041ರ ಅಂತ್ಯಕ್ಕೆ ಪ್ರಯಾಣಿಕರ ಸಂಖ್ಯೆ 35 ಸಾವಿರಕ್ಕೆ ಏರಿಕೆ ನಿರೀಕ್ಷಿಸಲಾಗಿದೆ.



ವಿಮಾನ ನಿಲ್ದಾಣ ಆವರಣದಲ್ಲಿ ಬರುವ ಮೆಟ್ರೋ ನಿಲ್ದಾಣಗಳ ನಿರ್ವಹಣೆ ಮತ್ತು ಮೇಲುಸ್ತುವಾರಿಗೆ ಸಂಬಂಧಿಸಿದಂತೆ ಬಿಐಎಎಲ್ ಮತ್ತು ಬಿಎಂಆರ್‌ಸಿಎಲ್ ಮುಖ್ಯಮಂತ್ರಿ ಯಡಿಯೂರಪ್ಪ ಸಮ್ಮುಖದಲ್ಲಿ ಒಡಂಬಡಿಕೆ ಮಾಡಿಕೊಂಡವು.

**ಗುರಿ ಸಾಧನೆಗೆ ಒಟ್ಟಾಗಿ ಶ್ರಮ:** ಈ ವೇಳೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಾತನಾಡಿ, 'ನಗರಕ್ಕೆ ಬಹಳ ಅಗತ್ಯವಾದ ಸಂಚಾರ ಮೂಲಸೌಕರ್ಯಕ್ಕೆ ವಿನೂತನ ರೀತಿಯಲ್ಲಿ ಹಣಕಾಸು ನೆರವಿನ ಯೋಜನೆ ಕೈಗೊಂಡಿರುವುದು ಅಭಿನಂದನೀಯ. ಪ್ರಧಾನಿ ಮೋದಿ ಅವರ ಸಮಗ್ರ ಬಹುಮಾದರಿ ಸಂಪರ್ಕ ಮೂಲಸೌಕರ್ಯ ಗುರಿ ಸಾಧನೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಎಲ್ಲ ಏಜೆನ್ಸಿಗಳು ಹಾಗೂ ಪಾಲುದಾರರು ಒಟ್ಟಾಗಿ ಶ್ರಮಿಸಬೇಕು' ಎಂದರು.

## ಏರ್‌ಪೋರ್ಟ್ ಹಾಲ್ಟ್ ಸ್ಟೇಷನ್‌ಗೆ ನೆರವು

ಬೆಂಗಳೂರು: ದೇವನಹಳ್ಳಿಯ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ (ಬಿಐಎಎಲ್) ಹಾಲ್ಟ್ ಸ್ಟೇಷನ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಬಿಐಎಎಲ್ ಮತ್ತು ಭಾರತೀಯ ರೈಲ್ವೆ ನಡುವೆ ಮಂಗಳವಾರ ಒಡಂಬಡಿಕೆ ಮಾಡಿಕೊಳ್ಳಲಾಯಿತು.

ಒಪ್ಪಂದದ ಪ್ರಕಾರ ಹಾಲ್ಟ್ ಸ್ಟೇಷನ್ ನಿರ್ಮಾಣ ವೆಚ್ಚವನ್ನು ಬಿಐಎಎಲ್ ಭರಿಸಲಿದ್ದು ನಿಲ್ದಾಣದ ನಿರ್ವಹಣೆ ಮತ್ತು ಕಾರ್ಯಾಚರಣೆ ಹೊಣೆ ಭಾರತೀಯ ರೈಲ್ವೆ ಇಲಾಖೆಯದ್ದಾಗಿರಲಿದೆ. ಈಗಾಗಲೇ ನಿರ್ಮಾಣಗೊಳ್ಳುತ್ತಿರುವ ಹಾಲ್ಟ್ ಸ್ಟೇಷನ್ ಶೀಘ್ರ ಸೇವೆಗೆ ಮುಕ್ತವಾಗಲಿದೆ. ಈ ಒಡಂಬಡಿಕೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ಸುರೇಶ್ ಅಂಗಡಿ ಸಾಕ್ಷಿಯಾದರು.

ಮುಂದಿನ ದಿನಗಳಲ್ಲಿ ಈ ಹಾಲ್ಟ್ ಸ್ಟೇಷನ್‌ನಿಂದ ಟರ್ಮಿನಲ್ ಸೇರಿದಂತೆ ವಿಮಾನ ನಿಲ್ದಾಣದ ವಿವಿಧ ಭಾಗಗಳಿಗೆ ಪ್ರಯಾಣಿಕರ ಅನುಕೂಲಕ್ಕಾಗಿ

- ಏರ್‌ಪೋರ್ಟ್ ಹಾಲ್ಟ್ ಸ್ಟೇಷನ್‌ಗೆ ವಿನೂತನ ಹಣಕಾಸಿನ ನೆರವು
- ನಿಲ್ದಾಣ ನಿರ್ಮಾಣಕ್ಕೆ ವೆಚ್ಚ ಭರಿಸಲಿರುವ ಬಿಐಎಎಲ್‌ಹಾಲ್ಟ್ ಸ್ಟೇಷನ್‌ನಿಂದ ಏರ್‌ಪೋರ್ಟ್‌ಗೆ ಉಚಿತ ಶಟಲ್ ಸೇವೆ

ಬಿಐಎಎಲ್ ಉಚಿತ ಶಟಲ್ ಸೇವೆಗಳನ್ನು ಕಲ್ಪಿಸಲಿದೆ. ರೈಲುಗಳ ವೇಳಾಪಟ್ಟಿಗೆ ಅನುಗುಣವಾಗಿ ಈ ಸೇವೆ ಇರಲಿದೆ.

ಈ ವೇಳೆ ಮಾತನಾಡಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ 'ಈ ಯೋಜನೆಗೆ ಪೂರಕವಾಗಿ ಬಿಐಎಎಲ್ ಮತ್ತು ಭಾರತೀಯ ರೈಲ್ವೆ ಒಂದೇ ವೇದಿಕೆಯಲ್ಲಿ ಬಂದು ವಿನೂತನ ಹಣಕಾಸಿನ ಮಾದರಿ ಅಳವಡಿಸಿಕೊಂಡು, ಯೋಜನೆ ಅನುಷ್ಠಾನಕ್ಕೆ ಬೆಂಬಲಿಸುತ್ತಿರುವುದು ಸ್ವಾಗತಾರ್ಹ' ಎಂದರು. ಸಚಿವ ಸುರೇಶ್ ಅಂಗಡಿ ಮಾತನಾಡಿದರು.

'ವಿಮಾನ ನಿಲ್ದಾಣದಿಂದ ಮೆಟ್ರೋ ಸಂಪರ್ಕದಿಂದ ಬೆಂಗಳೂರು ಮತ್ತು ವಿಮಾನ ನಿಲ್ದಾಣಗಳ ನಡುವೆ ಸುಲಭ ಸಂಪರ್ಕ ಸೃಷ್ಟಿಯಾಗುತ್ತದೆ. ವಿಮಾನ ಪ್ರಯಾಣಿಕರ ಪಯಣ ಮತ್ತಷ್ಟು ಸುಧಾರಿಸಲಿದೆ' ಎಂದು ಬಿಐಎಎಲ್ ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹರಿ ಮರಾರ್ ಹೇಳಿದರು.

'ಮುಂದಿನ ಐದು ವರ್ಷಗಳಲ್ಲಿ ನೂತನ ಮೆಟ್ರೋ ಜಾಲದ 128 ಕಿ.ಮೀ. ಸೇರ್ಪಡೆಗೊಳಿಸಲು ಬಿಎಂಆರ್‌ಸಿಎಲ್ ಬದ್ಧತೆಯೊಂದಿಗೆ ಕೆಲಸ ಮಾಡುತ್ತಿದೆ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಾದ ಅಜಯ್ ಸೇಠ್ ತಿಳಿಸಿದರು.